**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ. 1746/2023**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ | | 4. ಈಶ<br>ಬಿನ್ ಕರಿಬಸಯ್ಯ,<br>ವಯಸ್ಸುಃ 28 ವರ್ಷ,<br>ವಾಸಃ ಚಿಕ್ಕಕುರುಬರಹಳ್ಳಿ ಗ್ರಾಮ,<br>ಚನ್ನಗಿರಿ ತಾಲ್ಲೂಕು. |

:: **ದೋಷಾರೋಪಣೆ** ::

ನಾನು ಶ್ರೀಮತಿ. ಮಹಾಲಕ್ಷ್ಮಿ ಜಿ. ಎಂ.ಎ., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ದಿನಾಂಕ 07.07.2012 ರಂದು ಬೆಳಗಿನ ಜಾವ 3.00 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಹಿರೇಗಂಗೂರು ಗ್ರಾಮದ ವಾಸಿ ಚಾಸಾ.1 ರವರು ತಮ್ಮ ಬಾಬ್ತು ಕಿರಾಣಿ ಅಂಗಡಿಯಲ್ಲಿಟ್ಟಿದ್ದ ನಗದು ಹಣ, ಸಿಗರೇಟ್, ಗುಟ್ಕಾ ಪಾಕೆಟ್, ಸ್ಟೀಲ್ ಸಾಮಗ್ರಿಗಳು ಸೇರಿ ಒಟ್ಟು 13000/- ರೂ ಬೆಲೆಯ ವಸ್ತುಗಳನ್ನು 4 ನೇ ಅರೋಪಿಯಾದ ನೀವು ಇತರೆ ಆರೋಪಿಗಳೊಂದಿಗೆ ಸೇರಿಕೊಂಡು ಕಳುವು ಮಾಡುವ ಉದ್ದೇಶದಿಂದ ಅಂಗಡಿಯ ಬೀಗ ಮುರಿದು ಒಳಗಡೆ ಪ್ರವೇಶ ಮಾಡಿ ಕಳುಹು ಮಾಡಿಕೊಂಡು, ಅಂಗಡಿಯ ಮುಂಭಾಗದಲ್ಲಿ ಎರಡು ಬೈಕ್ ಗಳಲ್ಲಿ ನಿಂತಿದ್ದವರನ್ನು ಕಂಡು ಚಾಸಾ.7 ರವರು ಚಾಸಾ.1 ರವರಿಗೆ ಫೋನ್ ಮಾಡಿ ತಿಳಿಸಿದ್ದರಿಂದ ಚಾಸಾ.1 ರವರು ಚಾಸಾ.6 ರವರೊಂದಿಗೆ ಬೈಕಿನಲ್ಲಿ ಹೊರಟು ಅಂಗಡಿ ಕಡೆಗೆ ಬರುತ್ತಿರುವುದನ್ನು ಕಂಡ ಆರೋಪಿತರು ತಮ್ಮ ತಮ್ಮ ಬೈಕ್ ಗಳಲ್ಲಿ ಅಲ್ಲಿಂದ ಹೊರಟಿರುತ್ತಾರೆ. ಚಾಸಾ.1 ಮತ್ತು 6 ರವರು ಅಂಗಡಿ ಬಳಿ ಬಂದು ನೋಡಿ ಕಳುವು ಆಗಿರುವುದನ್ನು ಖಚಿತಪಡಿಸಿಕೊಂಡು ಚಾಸಾ.6 ರವರೊಂದಿಗೆ ಬೈಕಿನಲ್ಲಿ ಬೆನ್ನಟ್ಟಿ ಕೊರಟಿಕೆರೆ ಗ್ರಾಮದ ಬಳಿ ಬೆಳಗಿನ ಜಾವ 3.20 ಗಂಟೆ ಸಮಯದಲ್ಲಿ ಆರೋಪಿತರನ್ನು ಅಡ್ಡಗಟ್ಟಿ ನಿಲ್ಲಿಸಿದ್ದರಿಂದ ಎಲ್ಲಾ ಆರೋಪಿತರು ಸೇರಿ ಚಾಸಾ.1, 6 ರವರ ಮೇಲೆ ಹಲ್ಲೆ ನಡೆಸಿ ಚಾಸಾ.1

ರವರಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಚಾಸಾ.1 ರವರ ವಸ್ತುಗಳನ್ನು ಸುಲಿಗೆ ಮಾಡಿಕೊಂಡು ಹೋಗಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 394 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

**ದಿನಾಂಕಃ** ಸಹಿ/-

**ಸ್ಥಳಃ ಚನ್ನಗಿರಿ.** **ಸಿ/ಸಿ 2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಜೆಎಮ್‌ಎಫ್‌ಸಿ ನ್ಯಾಯಾಲಯ, ಚನ್ನಗಿರಿ.**